# ಮಳೆಯಲಿ ಜೊತೆಯಲಿ...

ಮಳೆಗಾಲ ಆರಂಭವಾಗಿದೆ. ಫ್ಯಾಷನ್ ಜಗತ್ತೂ ಮಳೆರಾಯನ ಆಟಕ್ಕೆ ಸ್ಪಂದಿಸಲು ಸಜ್ಜಾಗಿದೆ. ಬರೀ ದಿರಿಸು ಅಷ್ಟೇ ಅಲ್ಲ, ಮೇಕಪ್, ಫ್ಯಾಷನ್ ಆ್ಯಕ್ಸೆಸರೀಸ್‌ಗಳಲ್ಲೂ ಟ್ರೆಂಡಿ ಆಗಿರುವ ಫ್ಯಾಷನ್ ಉತ್ಪನ್ನಗಳು ಬಂದಿವೆ. ಜೊತೆಗೆ ಬೆಚ್ಚಗಿರಿಸುವ ಸ್ವೆಟರ್, ಸ್ಕಾರ್ಫ್‌ಗಳೂ ಮಳೆಗಾಲದ ಬಳಕೆಗಾಗಿಯೇ ಸಿದ್ಧವಾಗಿವೆ. ಇವೆಲ್ಲವನ್ನೂ ಬಳಸಿ ಮಳೆಗಾಲದ ಥಂಡಿಗಾಳಿಯಲ್ಲೂ ಬೆಚ್ಚನೆಯ ಅನುಭವ ಪಡೆಯುವುದು ಹೇಗೆ?

■ ಉಮಾ ವೇಣೂರು



ಐಶ್ವರ್ಯಾ



ವಾತಾವರಣ ತಂಪಾಗಿದೆ. ಮುಂಗಾರಿನ ಆಗಮನವಾಗಿ ಮೋಡ ಹಾಗೂ ಮಳೆಯ ಆಟ–ಆರ್ಭಟ ಶುರುವಾಗಿದೆ. ತಂಪು ವಾತಾವರಣಕ್ಕೆ ಹಾಗೂ ಮಳೆಯಲ್ಲಿ ಮನೆಯಿಂದ ಹೊರ ಹೋಗಲು ಫ್ಯಾಷನಬಲ್ ಆಗಿರುವ ವಿಶೇಷ ಉಡುಪುಗಳನ್ನು ಖರೀದಿಸುವ ಅಥವಾ ಈಗಾಗಲೇ ವಾರ್ಡ್‌ರೋಬ್‌ನಲ್ಲಿ ಇದ್ದರೆ ಹೊರತೆಗೆಯುವ ಸಮಯ ಸನ್ನಿಹಿತವಾಗಿದೆ. ಮಳೆಗಾಲದ ಥಂಡಿ ಹವಾದಲ್ಲೂ ಬೆಚ್ಚನೆಯ ಅನುಭವ ಪಡೆದು ಫ್ಯಾಷನ್‌ಗೂ ಯಾವುದೇ ಧಕ್ಕೆಯಾಗದಂತೆ ಇರಬಯಸುತ್ತಾರೆ ಫ್ಯಾಷನ್‌ಪ್ರಿಯರು. ಮಳೆಗಾಲಕ್ಕೆಂದೇ ಇರುವ ಉಡುಪು, ಒಡವೆ, ರೈನ್‌ಕೋಟ್, ಸ್ವೆಟರ್, ಸ್ಕಾರ್ಫ್, ಜಾಕೆಟ್ಸ್, ಟ್ರಾನ್ಸ್‌ಪರೆಂಟ್ ಕ್ಯಾಪ್‌ಗಳು ಈಗ ಮಾರುಕಟ್ಟೆಗೆ ಬಂದಿವೆ.

### ಮಳೆಗಾಲಕ್ಕಾಗಿಯೇ ಡ್ರೆಂಚ್ ಕೋಟ್ಸ್

ಮಳೆಗಾಲದಲ್ಲಿ ಬಳಸಲೆಂದೇ ವಿನೂತನ ಮಾದರಿಯ ಹಾಗೂ ಟ್ರೆಂಡ್‌ಗೆ ತಕ್ಕಂತಹ ಡ್ರೆಂಚ್ ಕೋಟ್‌ಗಳು ಬಂದಿವೆ. ಇದನ್ನು ಫ್ಯಾಷನ್ ಉಡುಗೆಗಳ ಮೇಲೆ ಹಾಕಬಹುದು. ಪಾರದರ್ಶಕ ಜಾಕೆಟ್ ಮಾದರಿಯಲ್ಲಿ ಇರುವ ಡ್ರೆಂಚ್ ಕೋಟ್ ಅತ್ಯಾಕರ್ಷಕ ಪ್ರಿಂಟ್‌ಗಳಿಂದಲೂ ಕೂಡಿದ್ದು ಸಖತ್ ಲುಕ್ ಕೊಡುತ್ತದೆ. ಕ್ಯಾಮಫ್ಲಾಜ್ ಪ್ರಿಂಟ್, ಆಧುನಿಕ ಚೆಕ್ಸ್, ಹೂವುಗಳು, ಎಲೆ, ಬಳ್ಳಿಯಾಕಾರದ ಚಿತ್ರಗಳು, ಪಾಪ್ ಬಣ್ಣಗಳು ಈ ಕೋಟ್‌ನ ಸೊಬಗನ್ನು ಹೆಚ್ಚಿಸಿವೆ. ಈಗೀಗ ಈ ಕೋಟ್‌ಗಳು ಮಲ್ಟಿಪರ್ಪಸ್ ಕೂಡ ಆಗಿದ್ದು ಮಳೆಗಾಲ ಮಾತ್ರವಲ್ಲದೆ ಪಾರ್ಟಿ, ಫ್ಯಾಷನ್ ಶೋಗಳಂತಹ ಇತರ ಸಂದರ್ಭಗಳಿಗೂ ಸೂಕ್ತವೆನಿಸಿವೆ.

### ಮಳೆಗಾಲಕ್ಕೂ ಸೈ ಎನಿಸುವ ಸ್ವೆಟರ್!

ಸ್ವೆಟರ್ ಎಂದರೆ ಅದು ಚಳಿಗಾಲಕ್ಕೆ ಮಾತ್ರ ಸೂಕ್ತ ಎಂಬುದು ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯ. ಆದರೆ ಮಳೆಗಾಲದ ಈ ತಂಪು ವಾತಾವರಣಕ್ಕೆ ಸೈ ಎನಿಸುವ ಸ್ವೆಟರ್ ಇದೀಗ ಮಾರುಕಟ್ಟೆಯಲ್ಲಿ ಲಭ್ಯ. ಮಳೆಗಾಲದಲ್ಲಿ ಬೆಳಿಗ್ಗೆ,